# ಚೀನಾದಲ್ಲಿ ನೆಲೆನಿಂತ ‘ದೇವ’

ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಅಭಿಮಾನವನ್ನು ಅಭಿವ್ಯಕ್ತಿಸಲು ನೀವು ಎಷ್ಟು ದೂರ ಹೋಗಬಹುದು? ನೀವು ಎಷ್ಟೇ ಕ್ರಮಿಸಿದರೂ ದೇವ್ ರತೌರಿ ಎಂಬ ಯುವಕನಷ್ಟು ದೂರ ಹೋಗಲು ಸಾಧ್ಯವೇ ಇಲ್ಲ ಬಿಡಿ. ಚೀನಾದ ಸೂಪರ್ ಸ್ಟಾರ್ ಬ್ರೂಸ್ ಲೀ ಮೇಲಿನ ಅಭಿಮಾನ ಈ ಯುವಕನನ್ನು ಉತ್ತರಾಖಂಡದ ಟಿಹರಿ ಗಡ್ವಾಲ್‌ನಿಂದ ಚೀನಾವರೆಗೆ ಕರೆದೊಯ್ದಿದೆ. ದೇವ್ ಬೆಳೆದ ಎತ್ತರ, ಮಾಡಿದ ಸಾಧನೆಯ ಕಥೆಯನ್ನು ಚೀನಾ ಶಾಲೆಗಳಲ್ಲೀಗ ಮಕ್ಕಳಿಗೆ ಹೇಳಲಾಗುತ್ತಿದೆ.

ಅದು 1997ರ ಒಂದು ದಿನ. ಶಾಲೆಯಿಂದ ಮರಳಿದ ದೇವ್, ‘ಡ್ರ್ಯಾಗನ್: ದಿ ಬ್ರೂಸ್ ಲೀ ಸ್ಟೋರಿ’ಯ ವಿಡಿಯೊಕ್ಯಾಸೆಟ್ ಅನ್ನು ಬಾಡಿಗೆಗೆ ತಂದು, ನೋಡಿದ್ದರು. ಇಂಗ್ಲಿಷ್‌ನ ಗಂಧ–ಗಾಳಿ ಗೊತ್ತಿಲ್ಲದ ಆ ಹುಡುಗನಿಗೆ ಈ ಚಿತ್ರದ ವೀಕ್ಷಣೆ ತುಂಬಾ ಖುಷಿಕೊಟ್ಟಿತು. ‘ನನಗೆ ಕಬ್ಬಿಣದ ಕಡಲೆಯಾಗಿದ್ದ ಇಂಗ್ಲಿಷ್‌ನಲ್ಲಿ ಡ್ರ್ಯಾಗನ್ ಚಿತ್ರದಲ್ಲಿ ಲೀ ತುಂಬಾ ನಿಧಾನವಾಗಿ ಮಾತನಾಡುತ್ತಿದ್ದರು. ಇದರಿಂದ ನನಗೆ ಇಂಗ್ಲಿಷ್ ಕಲಿಕೆಯ ಹಾದಿ ಸುಲಭವಾಯಿತು. ನಾನು ಎ, ಬಿ, ಸಿ, ಡಿ ಕಲಿತಿದ್ದೇ ಆರನೇ ತರಗತಿಯಲ್ಲಿ’ ಎಂದು ನೆನೆಯುತ್ತಾರೆ ದೇವ್.

‘ಬ್ರೂಸ್ ಲೀ ಒಬ್ಬ ಸಮರಕಲೆಯ ಚಾಂಪಿಯನ್. ಯಾವುದೇ ಆಯುಧವಿಲ್ಲದೆ ಹೋರಾಡುತ್ತಿದ್ದ ಅವರ ‘ಆ್ಯಕ್ಷನ್’ ನನ್ನನ್ನು ಸೂರೆಗೊಂಡಿತು. ಅವರಂತೆ ಆಗಬೇಕೆಂಬ ಅದಮ್ಯ ಆಸೆಯೂ ಚಿಗುರಿತು’ ಎಂದೆನ್ನುವಾಗ ದೇವ್ ಅವರ ಕಣ್ಣುಗಳು ಹೊಳೆಯುತ್ತವೆ. ಲೀ ಅವರ ಅಭಿನಯದಿಂದ ಪ್ರೇರೇಪಣೆಗೊಂಡ ಅವರೀಗ 35 ಚಿತ್ರಗಳಲ್ಲಿ ನಟಿಸಿದ್ದಾರೆ. ಟಿ.ವಿ. ಡ್ರಾಮಾಗಳಲ್ಲೂ ಅವರ ಅಭಿನಯ ವೀಕ್ಷಕರ ಮನಗೆದ್ದಿದೆ. ‘ದಿ ಟ್ರ್ಯಾಪ್ಡ್’, ‘ಮೈ ರೂಮೇಟ್ ಈಸ್ ಎ ಡಿಟೆಕ್ಟಿವ್’, ‘ಸ್ಟ್ರೇಂಜ್ ಲೆಜೆಂಡ್ ಆಫ್ ತಾಂಗ್ ಡೈನೆಸ್ಟಿ’ ಸೇರಿದಂತೆ ಹಲವು ಪ್ರಖ್ಯಾತ ಸಿನಿಮಾಗಳಲ್ಲಿ ಅವರು ನಟಿಸಿದ್ದಾರೆ. ನಟನೆ ಮತ್ತು ಸಮರಕಲೆ ಪ್ರದರ್ಶನ ಎರಡರಲ್ಲೂ ಅವರಿಗೆ ವಿಶೇಷ ಆಸಕ್ತಿ. ಟಿಹರಿ ಗಡ್ವಾಲ್‌ನಿಂದ ಚೀನಾವರೆಗಿನ ಅವರ ಯಾತ್ರೆಯ ಕಥೆಯೀಗ ಚೀನಾ ಶಾಲೆಯಲ್ಲಿ ಪಠ್ಯವಾಗಿದೆ.



**ಪ್ರವೀಣ ಕುಲಕರ್ಣಿ**

ಚೀನಾಕ್ಕೆ ಹೋಗುವ ಮುಂಚೆ ದೇವ್, ದೆಹಲಿಗೆ ಸ್ಥಳಾಂತರಗೊಂಡಿದ್ದರು. ಹತ್ತನೇ ತರಗತಿವರೆಗೆ ಓದಿದ್ದ ಅವರು, ಅಲ್ಲಿ ಹಾಲು ಮಾರುವುದು, ಕಾರು ಓಡಿಸುವುದು, ಹೋಟೆಲ್‌ನಲ್ಲಿ ವೇಟರ್ ಆಗಿ ಕೆಲಸ ಮಾಡುವುದು – ಹೀಗೆ ದುಡಿಮೆಯಲ್ಲಿ ತೊಡಗಿ, ಊರಿನಲ್ಲಿದ್ದ ತಮ್ಮ ಬಡಕುಟುಂಬಕ್ಕೆ ಸಾಧ್ಯವಾದಷ್ಟು ನೆರವಾಗುತ್ತಿದ್ದರು. 1998ರಲ್ಲಿ ಅವರು ಮುಂಬೈಗೆ ಬಂದು ನೆಲೆ ನಿಂತರು. ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸವನ್ನೂ ಹುಡುಕಿಕೊಂಡರು. ಅವರ ಸಹೋದರ, ಮುಂಬೈನಲ್ಲೇ ಸಿನಿಮಾ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಸಹೋದರನೊಂದಿಗೆ ದೇವ್ ಸಹ ಸೆಟ್‌ಗೆ ಹೋಗುತ್ತಿದ್ದರು. ಒಮ್ಮೆ ಕ್ಯಾಮೆರಾ ಮುಂದೆ ಸಂಭಾಷಣೆ ಹೇಳುವ ಅಭಿಲಾಷೆಯನ್ನೂ ವ್ಯಕ್ತಪಡಿಸಿದ್ದರು. ‘ಲೈಟ್ಸ್, ಕ್ಯಾಮೆರಾ, ಆ್ಯಕ್ಷನ್’ ಎಂದು ಹೇಳುತ್ತಲೇ ಪ್ರಕಾಶಮಾನ ಬೆಳಕು ನನ್ನ ಮೈಮೇಲೆ ಹರಿದಾಗ ಉರು ಹೊಡೆದ ಸಂಭಾಷಣೆಯೆಲ್ಲ ಮರೆತುಹೋಗಿ, ಕೈಕಾಲುಗಳು ನಡುಗಿದ್ದವು’ ಎಂದು ಆಗಿನ ಘಟನೆಯನ್ನು ನೆನೆಯುತ್ತಾರೆ.

ದೇವ್, 2005ರಲ್ಲಿ ಚೀನಾಕ್ಕೆ ಹೋಗಲು ಯಶಸ್ವಿಯಾದರೂ ಅಲ್ಲಿ ಉಳಿಯಲಾಗದೆ ನೋವಿನಿಂದ ದೆಹಲಿಗೆ ವಾಪಸ್ ಆಗಿದ್ದರು. ಮತ್ತೆ ಹೋಟೆಲ್‌ನಲ್ಲಿ ಕೆಲಸ. ಆದರೆ, ಕೆಲವೇ ದಿನಗಳಲ್ಲಿ ದೇವ್ ಅದೃಷ್ಟ ಖುಲಾಯಿಸಿತು. ಚೀನಾದಲ್ಲಿ ರೆಸ್ಟೋರೆಂಟ್ ಹೊಂದಿದ್ದ ಮಾಲೀಕನ ಪರಿಚಯವಾಗಿ ದೇವ್ ಮತ್ತೆ ಚೀನಾಕ್ಕೆ ಹಾರಿಬಿಟ್ಟರು. ‘ನಾನು ಚೀನಾಕ್ಕೆ ಹೋಗಿದ್ದು ಸಮರಕಲೆ ಕುಂಗ್ ಫು ಕಲಿಯುವುದಕ್ಕಾಗಿಯೇ ಹೊರತು ಹೋಟೆಲ್‌ನಲ್ಲಿ ಕೆಲಸ ಮಾಡಲಿಕ್ಕಲ್ಲ ಎನ್ನುವುದರ ಅರಿವು ನನಗಿತ್ತು. ಹೀಗಾಗಿ ಹಗಲು ಹೊತ್ತಿನಲ್ಲಿ ಹೋಟೆಲ್ ಕೆಲಸ ಮಾಡಿದರೆ, ರಾತ್ರಿ ಕುಂಗ್ ಫು ಕಲಿಯಲು ಹೋಗುತ್ತಿದ್ದೆ. ಬ್ರೂಸ್ ಲೀ ಕೂಡ ಹೋಟೆಲ್‌ನಲ್ಲಿ ಪಾತ್ರೆ ತೊಳೆಯುವ ಕೆಲಸ ಮಾಡುತ್ತಲೇ ಕುಂಗ್ ಫು ಕಲಿತಿದ್ದರು. ನನ್ನ ಬದುಕೂ ಅವರಂತೆಯೇ ಆಗಿತ್ತು’ ಎಂದು ದೇವ್ ವಿವರಿಸುತ್ತಾರೆ.

ಐದೇ ವರ್ಷಗಳಲ್ಲಿ ವೇಟರ್‌ನಿಂದ ಜನರಲ್ ಮ್ಯಾನೇಜರ್ ಹುದ್ದೆಗೆ ಬಡ್ತಿ ಹೊಂದಿದ ದೇವ್, ಮುಂದೆ ತಮ್ಮದೇ ಒಂದು ಹೋಟೆಲ್ ಶುರುಮಾಡಿದರು. ಈಗ ಅವರು 13 ಹೋಟೆಲ್‌ಗಳ ಒಡೆಯ. ಚೀನಾದ ಷಿಯಾನ್ ನಗರದಲ್ಲಿ ಅಂಬರ್ ಪ್ಯಾಲೇಸ್ ಎಂಬ ದೊಡ್ಡ ಹೋಟೆಲ್ ಸಹ ಹೊಂದಿದ್ದಾರೆ. ಚೀನಾದ ಪ್ರಸಿದ್ಧ ಸಿನಿಮಾ ನಿರ್ದೇಶಕ ತಾಂಗ್, ದೃಶ್ಯವೊಂದರ ಚಿತ್ರೀಕರಣಕ್ಕೆ ದೇವ್ ಅವರ ಹೋಟೆಲ್ ಆಯ್ಕೆ ಮಾಡಿಕೊಂಡಿದ್ದರು. ದೇವ್‌ಗೆ ಒಂದು ಪುಟ್ಟ ಪಾತ್ರವನ್ನೂ ನೀಡಿದ್ದರು. ಹೀಗೆ ಶುರುವಾದ ನಟನೆಯ ಯಾತ್ರೆ, ಮುಂದೆ ಹಲವು ಸಿನಿಮಾಗಳಲ್ಲಿ ನಟಿಸಲು ಕಾರಣವಾಯಿತು. ಹೀಗೆ ದೊಡ್ಡ ನಟನಾಗಿಯೂ ಅವರು ಗುರುತಿಸಿಕೊಳ್ಳಲು ಸಾಧ್ಯವಾಯಿತು.

ನೂರು ಜನರಿಗೆ ಉದ್ಯೋಗ ನೀಡಿರುವ ದೇವ್, ಭಾರತ ಮತ್ತು ಚೀನಾದಲ್ಲಿ ಹಲವು ಸಾಮಾಜಿಕ ಕಾರ್ಯಗಳಲ್ಲೂ ನಿರತರಾಗಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಕಾಲೇಜು ಮೆಟ್ಟಿಲು ಏರದ ಈ ಯುವಕನನ್ನು ವಿಶ್ವವಿದ್ಯಾಲಯಗಳು ಉಪನ್ಯಾಸ ನೀಡಲು ಮುಗಿಬಿದ್ದು ಕರೆಯುತ್ತಿವೆ. ದೇವ್, ಯಥಾಪ್ರಕಾರ ಪ್ರೇರಣೆ ತುಂಬುವ ಕೆಲಸದಲ್ಲಿ ನಿರತರಾಗಿದ್ದಾರೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65